ವಿಕ ಪ್ರಸ್ತುತಿ
ಇದು ಚುನಾವಣೆ ರಾಜಕೀಯ ಆಟ
GRAMENER ಸಹಯೋಗದೊಂದಿಗೆ

ಚುನಾವಣೆಯ ಅಂಕಿ ಅಂಶಗಳನ್ನು ದೃಶ್ಯಾವಳಿಗಳ ಮೂಲಕ ಮುಂದಿಡುವ ಡೇಟಾ ವಿಷುವಲೈಸೇಷನ್‌ನ ಎರಡನೇ ಸರಣಿ ಇದು. 2008ರ ಚುನಾವಣಾ ಕಣವನ್ನು ಓದಿ ಅರ್ಥ ಮಾಡಿಕೊಳ್ಳುವ ಬದಲು ನೋಡಿ ಅರ್ಥ ಮಾಡಿಕೊಳ್ಳಿ... ಜತೆಗೆ ಆಟ ಆಡಿ...

ಹಿರಿ ಹಿರಿ ಹಿಗ್ಗು... ಕಿರಿ ಕಿರಿ ಕುಗ್ಗು...

1 ಪ್ರಚಂಡ ವಿಜಯಿಗಳಿವರು

ಇದು 2008ರ ಚುನಾವಣೆಯಲ್ಲಿ ವಿಜೇತರಾದ ಅಭ್ಯರ್ಥಿಗಳ ಗೆಲುವಿನ ಅಂತರವನ್ನು (ಮಾರ್ಜಿನ್) ಆಧರಿಸಿ ರೂಪಿಸಲಾದ ಕಾರ್ಟೋಗ್ರಾಮ್. ಇಲ್ಲಿ ಬೇರೆ ಬೇರೆ ಪಕ್ಷಗಳ ಅಭ್ಯರ್ಥಿಗಳು ಹಾಗೂ ಅವರ ಗೆಲುವಿನ ಅಂತರಗಳನ್ನು ಬೇರೆ ಬೇರೆ ಬಣ್ಣಗಳಲ್ಲಿ ಸೂಚ್ಯವಾಗಿ ಉಲ್ಲೇಖಿಸಲಾಗಿದೆ.

ಒಟ್ಟಾರೆ ಈ ನಕ್ಷೆಯನ್ನು ಸೂಕ್ಷ್ಮವಾಗಿ ಗಮನಿಸಿ ನೋಡಿ. ಕಡುಕಂದು ಬಣ್ಣ ಶೇ 35ಕ್ಕಿಂತ ಹೆಚ್ಚಿನ ಅಂತರದಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆದ್ದ ಕ್ಷೇತ್ರ. ಅಂಥ ಕ್ಷೇತ್ರಗಳು ಮೂರು ಮಾತ್ರ. ಅಂದರೆ, ಈ ಚಿತ್ರದ ಮೂಲಕ ಒಂದು ಸ್ಪಷ್ಟವಾಗುತ್ತದೆ– ಬಿಜೆಪಿಯಲ್ಲಿ ಮೂವರು ಮಾತ್ರ ಶೇ 35ಕ್ಕಿಂತ ಹೆಚ್ಚಿನ ಮತಗಳ ಅಂತರದಲ್ಲಿ ಗೆಲುವು ಸಾಧಿಸಿರುವುದು ಗೊತ್ತಾಗುತ್ತದೆ. ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಎ.ರವೀಂದ್ರನಾಥ್. ಅವರು ಎದುರಾಳಿ ಅಭ್ಯರ್ಥಿಗಿಂತ ಶೇ 51.3ರಷ್ಟು ಹೆಚ್ಚಿನ ಮತಗಳನ್ನು ಪಡೆದುಕೊಂಡಿದ್ದರು. ವಿಶೇಷವೆಂದರೆ ಆ ಬಾರಿ ತಾಂತ್ರಿಕ ಕಾರಣಗಳಿಂದಾಗಿ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಕಣದಲ್ಲಿರಲಿಲ್ಲ. ಮಾಲೂರಿನ ಶಾಸಕ ಎಸ್.ಎನ್.ಕೃಷ್ಣಯ್ಯ ಶೆಟ್ಟಿ ಶೇ 44.1ರಷ್ಟು ಅಂತರದಲ್ಲಿ ಗೆಲುವು ಸಾಧಿಸಿದ್ದರು.

ಕಡುಹಸಿರು ಬಣ್ಣ ಒಂದೇ ಕಡೆ ಇದೆ. ಅಂದರೆ, ಜೆಡಿಎಸ್‌ನ ಅಭ್ಯರ್ಥಿ ಗರಿಷ್ಠ ಅಂತರದಿಂದ ಗೆದ್ದಿದ್ದರು. ರಾಮನಗರದಲ್ಲಿ ನಡೆದ ಉಪಚುನಾವಣೆಯಲ್ಲಿ ಜೆಡಿಎಸ್‌ನ ಕೆ.ರಾಜು ಶೇ 37ರಷ್ಟು ಅಂತರದಿಂದ ಗೆದ್ದಿರುವುದು ಉಲ್ಲೇಖನೀಯ. ಕಡುನೀಲಿ ಬಣ್ಣ ಕಾಂಗ್ರೆಸ್‌ನ ಮಾರ್ಜಿನ್ ನ್ನು ಹೇಳುತ್ತದೆ. ವಿಜಯನಗರದಲ್ಲಿ ಕಾಂಗ್ರೆಸ್‌ನ ಎಂ.ಕೃಷ್ಣಪ್ಪ ಗರಿಷ್ಠ ಮತಗಳ ಅಂತರದಲ್ಲಿ ಗೆದ್ದಿದ್ದರು.

ಬಿಜೆಪಿಯ ಅಭ್ಯರ್ಥಿಗಳಲ್ಲಿ ಹೆಚ್ಚಿನವರು ಶೇ 5ಕ್ಕಿಂತ ಹೆಚ್ಚು 35ರೊಳಗಿನ ಅಂತರದಲ್ಲಿ ಗೆದ್ದವರು. ಕಳೆದ ಚುನಾವಣೆಯಲ್ಲಿ ಪಕ್ಷೇತರರ ಪಾತ್ರ ಗಣನೀಯವಾಗಿತ್ತು. ನಾಲ್ಕು ಕ್ಷೇತ್ರಗಳಲ್ಲಿ ಮಾತ್ರ (ಹಳದಿ ಬಣ್ಣ ಗಮನಿಸಿ) ಪಕ್ಷೇತರರು ಅತ್ಯಧಿಕ ಮತಗಳ ಅಂತರದಲ್ಲಿ ಗೆದ್ದಿದ್ದರು.

ಈ ನಕ್ಷೆಯ ಮೂಲಕ ನಾವು ಮುಂದಿನ ಚುನಾವಣೆಯಲ್ಲಿ ಯಾವ ಕ್ಷೇತ್ರ ಯಾವ ಅಭ್ಯರ್ಥಿಗೆ ಪೂರಕವಾಗಿ ವರ್ತಿಸಬಹುದು ಹಾಗೂ ಯಾರ ವಿರುದ್ಧವಾಗಿ ವರ್ತಿಸಬಹುದು ಎನ್ನುವ ಪ್ರಾಥಮಿಕ ಮತ್ತು ಅಂದಾಜು ಮಾಹಿತಿಯನ್ನು ಪಡೆದುಕೊಳ್ಳಬಹುದು. ಬಹುತೇಕ ಅಭ್ಯರ್ಥಿಗಳ ಗೆಲುವಿನ ಅಂತರ ಶೇ 10ಕ್ಕಿಂತ ಹೆಚ್ಚಿರಲಿಲ್ಲ.



ಕಾರ್ಟೋಗ್ರಾಮ್ ಸಿದ್ಧಪಡಿಸುವುದು ಹೇಗೆ?

ವಿಜಯ ಕರ್ನಾಟಕ ಪ್ರಸ್ತುತಪಡಿಸುತ್ತಿರುವ ಈ ನಕ್ಷೆಗೆ ಕಾರ್ಟೋಗ್ರಾಮ್ ಎನ್ನುತ್ತಾರೆ. ಇದು ಬರಿ ಬಣ್ಣ ಬಣ್ಣದ ಚಿತ್ರವಲ್ಲ. ಪರಿಪೂರ್ಣವಾದ ವೈಜ್ಞಾನಿಕ ಮಾನದಂಡವನ್ನು ಆಧರಿಸಿ ಸಿದ್ಧಪಡಿಸಲಾದ ನಕ್ಷೆ. ಇಲ್ಲಿ ಉಲ್ಲೇಖವಾಗಿರುವ ಕ್ಷೇತ್ರಗಳು ಆಯಾ ಭಾಗದ ರೇಖಾಂಶ ಮತ್ತು ಅಕ್ಷಾಂಶವನ್ನು ಗಣನೆಗೆ ತೆಗೆದುಕೊಂಡು ಸಿದ್ಧಪಡಿಸಲಾಗಿದೆ. ವಿವಿಧ ಅಂಕಿ ಅಂಶಗಳನ್ನು ಅತ್ಯಂತ ಸುಧಾರಿತ ಸಾಫ್ಟ್‌ವೇರ್ ಮೂಲಕ ಸಂಸ್ಕರಿಸಿ ಈ ನಕ್ಷೆ ರೂಪಿಸಲಾಗಿದೆ. ಭೌಗೋಳಿಕ ನಕ್ಷೆ ರೂಪಿಸಲು ಇಂಥ ಕಾರ್ಟೋಗ್ರಾಮ್ ತಂತ್ರಜ್ಞಾನದ ನೆರವು ಪಡೆಯುವುದು ಸಾಮಾನ್ಯ. ಆದರೆ ಚುನಾವಣೆಯ ಅಂಕಿ ಅಂಶಗಳ ಮಾಹಿತಿಯನ್ನು ಜನಸಾಮಾನ್ಯರಿಗೆ ಮುಟ್ಟಿಸಲು ಈ ತಂತ್ರ ಬಳಸುತ್ತಿರುವುದು ಪ್ರಾಯಶಃ ಇದೇ ಮೊದಲು. 1960ರಲ್ಲಿ ಮೊದಲ ಬಾರಿಗೆ ವಾಲ್ಡೊ ಟಾಬ್ಲರ್ ಎಂಬಾತ ಕಾರ್ಟೋಗ್ರಾಮ್ ರೂಪಿಸಿದ. ಅದಕ್ಕಿಂತ ಮೊದಲು ನಕ್ಷೆಯನ್ನು ಕೈಯಲ್ಲೇ ಬಿಡಿಸಲಾಗುತಿತ್ತು.

- **ಉದಾ:** ಗೆದ್ದವರ ಮಾರ್ಜಿನ್, ಅವರ ಕ್ಷೇತ್ರ, ಶಾಸಕರ ಹೆಸರು, ಅವರ ಪಕ್ಷ, ಆಯಾ ಕ್ಷೇತ್ರದ ರೇಖಾಂಶ- ಅಕ್ಷಾಂಶ.. ಹೀಗೆ ಧಂಡಿ ಮಾಹಿತಿಗಳನ್ನು ಸಂಸ್ಕರಣೆಗೊಳಪಡಿಸಿ ಅವುಗಳನ್ನು ಜನಸಾಮಾನ್ಯರು ಅರ್ಥೈಸಿಕೊಳ್ಳುವಂತೆ ನಕ್ಷೆಯನ್ನು ಸಿದ್ಧಪಡಿಸಲಾಗಿದೆ. ಈ ಮೂಲಕ ಸಮಗ್ರ ಕರ್ನಾಟಕದ ಒಂದು ಚಿತ್ರಣವನ್ನು ಮುಂದಿಡಲಾಗುತ್ತಿದೆ.

2 ಎತ್ತ ಯಾರ ವಿಕ್ರಮ



ಕಳೆದ ವಿಧಾನಸಭೆ ಚುನಾವಣೆಯಲ್ಲಿ ಯಾರು ಎಲ್ಲಿ ಗೆದ್ದರು? ರಾಜ್ಯದ ಯಾವ ಭಾಗ ಯಾವ ಪಕ್ಷದ ಹಿಡಿತದಲ್ಲಿತ್ತು ಎನ್ನುವುದನ್ನು ಅತ್ಯಂತ ಸರಳವಾಗಿ ಈ ನಕ್ಷೆ ನಿಮ್ಮ ಮುಂದೆ ಬಿಚ್ಚಿಡುತ್ತದೆ. ಕೇಸರಿ ಬಣ್ಣದ ಭಾಗವೆಲ್ಲವೂ ಬಿಜೆಪಿ. ಅಂದರೆ, ಆ ಪಕ್ಷ ಉತ್ತರ ಕರ್ನಾಟಕದ ಬಹುತೇಕ ಭಾಗ ಮತ್ತು ದಕ್ಷಿಣ ಕರ್ನಾಟಕದ ಕೆಲವು ಭಾಗಗಳಲ್ಲಿ ತನ್ನ ಪ್ರಾಬಲ್ಯ ಮೆರೆದಿತ್ತು. ದಕ್ಷಿಣ ಕರ್ನಾಟಕದಲ್ಲಿ ಕಾಂಗ್ರೆಸ್ ಶಕ್ತಿಯನ್ನು ನೀಲಿಬಣ್ಣದ ಮೂಲಕ ನೋಡಬಹುದು. ತನ್ನ ಸಾಂಪ್ರದಾಯಿಕ ಕ್ಷೇತ್ರಗಳಲ್ಲಿ ಜೆಡಿಎಸ್ ಗೆಲುವು ಸಾಧಿಸಿದೆ ಎನ್ನುವುದನ್ನು ಹಸಿರು ಬಣ್ಣದಲ್ಲಿ ಉಲ್ಲೇಖಿಸಲಾಗಿದೆ.

3 ಲೇಡೀಸ್ ಪಾಡು ನೋಡಿ



2008ರ ವಿಧಾನಸಭಾ ಚುನಾವಣೆಯಲ್ಲಿ ಕಣಕ್ಕಿಳಿದ ಮಹಿಳೆಯರ ಸಂಖ್ಯೆ 107. ಅದರಲ್ಲಿ ಗೆದ್ದವರು ಮೂರು ಮಂದಿ ಮಾತ್ರ. ಈ ಅಂಕಿ ಅಂಶವನ್ನು ಆಧರಿಸಿಯೋ ಏನೋ ಎಲ್ಲ ರಾಜಕೀಯ ಪಕ್ಷಗಳು ಈ ಬಾರಿಯೂ ಮಹಿಳೆಯರಿಗೆ ಟಿಕೆಟ್ ನೀಡಲು ಸಾಕಷ್ಟು ಮೀನ ಮೇಷ ಎಣಿಸುತ್ತಿವೆ. ಕಾಂಗ್ರೆಸ್‌ನಲ್ಲಂತೂ ಮಹಿಳಾಕಾಂಕ್ಷಿಗಳು ಹೊಸದಿಲ್ಲಿಯಲ್ಲಿ ಸೋನಿಯಾಗಾಂಧಿ ಮನೆ ಮುಂದೆ ಧರಣಿ ನಡೆಸುವಷ್ಟರ ಮಟ್ಟಿಗೆ ಮುಂದೆ ಹೋಗಿದ್ದಾರೆ. ಈ ನಕ್ಷೆಯನ್ನು ನೋಡಿ... ಯಾವ ಕ್ಷೇತ್ರದಲ್ಲಿ ಎಷ್ಟು ಮಂದಿ ಸ್ಪರ್ಧಿಸಿದ್ದಾರೆ ಎನ್ನುವ ಚಿತ್ರಣ ಸಿಕ್ಕಿಬಿಡುತ್ತದೆ.
ಗರಿಷ್ಠ ಸಂಖ್ಯೆ ಮಹಿಳಾ ಅಭ್ಯರ್ಥಿಗಳು ಕಣಕ್ಕಿಳಿದಿರುವುದನ್ನು ಗಾಢ ಕಂದುಬಣ್ಣದ ವೃತ್ತ ಸೂಚಿಸುತ್ತದೆ. ಅದು ವಿಜಯನಗರ ಕ್ಷೇತ್ರ.. ಅಲ್ಲಿದ್ದ 9 ಸ್ಪರ್ಧಿಗಳಲ್ಲಿ ನಾಲ್ವರು ಮಹಿಳೆಯರೇ. ಪುತ್ತೂರಿನಲ್ಲಿ ಶೇ 50ರಷ್ಟು ಮಹಿಳೆಯರದೇ ಹಣಾಹಣಿ. ಗೆದ್ದವರು, ಸೋತವರು ಇಬ್ಬರೂ ಮಹಿಳೆಯರೇ ಎನ್ನುವುದು ವಿಶೇಷ. ರಾಜ್ಯದ ನಕ್ಷೆ ತುಂಬಾ ಬಿಳಿ ಬಣ್ಣದ ವೃತ್ತಗಳೇ ಹರಡಿರುವುದನ್ನು ನೋಡಿದಿರಾ? ಅದರರ್ಥ ಇಲ್ಲೆಲ್ಲ ಮಹಿಳೆಯರು ಸ್ಪರ್ಧಿಸಲೇ ಇಲ್ಲ ಎಂದು.

ಅದ್ಭುತ ಪ್ರತಿಕ್ರಿಯೆ

ವಿಜಯ ಕರ್ನಾಟಕ ಪ್ರಸ್ತುತಪಡಿಸಿದ 'ಚುನಾವಣಾ ರಾಜಕೀಯ ಆಟ'ದ ಮೊದಲ ಸರಣಿಗೆ ಓದುಗರು ನಿರೀಕ್ಷೆಗೂ ಮೀರಿ ಸ್ಪಂದಿಸಿದರು. ನಮ್ಮ ವಿಭಿನ್ನ ಪ್ರಯೋಗದ ಕುರಿತು ರಾಜ್ಯದ ನಾನಾ ಭಾಗಗಳ ಓದುಗರು ಪತ್ರ-ಮಿಂಚಂಚೆಗಳ ಮೂಲಕ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಇದೇ ಪ್ರಯೋಗದಲ್ಲಿ ಓದುಗರಿಗಾಗಿ ಏರ್ಪಡಿಸಿದ್ದ 'ಆಟ'ಕ್ಕೆ ಉತ್ತರ ಕೊಟ್ಟವರ ಸಂಖ್ಯೆ 1200ಕ್ಕೂ ಹೆಚ್ಚು. 'ಬೆಂಗಳೂರಿನ ವಿಜಯನಗರ ಶಾಸಕ ಎಂ.ಕೃಷ್ಣಪ್ಪ ಅವರು ಚುನಾವಣಾ ಆಯೋಗಕ್ಕೆ ಸಲ್ಲಿಸಿದ ದಾಖಲೆ ಪ್ರಕಾರ ಅವರ ಆಸ್ತಿ 129 ಕೋಟಿ ರೂ. ಈ ಮೊತ್ತದಲ್ಲಿ ಸದ್ಯದ ಸರಕಾರಿ ಮಾರ್ಗದರ್ಶಿ ಬೆಲೆಯನ್ವಯ ವಿಜಯನಗರದಲ್ಲಿ 60x40ರ ಎಷ್ಟು ಸೈಟ್‌ಗಳನ್ನು ಖರೀದಿಸಬಹುದು?' ಎಂಬುದು ನಾವು ಕೇಳಿದ ಪ್ರಶ್ನೆಯಾಗಿತ್ತು. ಇದಕ್ಕೆ ಸರಿ ಉತ್ತರ 179 ಸೈಟ್‌ಗಳು. (ಇದರಲ್ಲೂ ₹ 12 ಲಕ್ಷ ಹೆಚ್ಚುವರಿಯಾಗಿ ಉಳಿಯುತ್ತದೆ)

ಓದುಗರು ಅತ್ಯಂತ ಉತ್ಸುಕತೆಯಿಂದ ಲೆಕ್ಕಾಚಾರ ಮಾಡಿ ಉತ್ತರಿಸಿದ್ದರು. ಸರಿಯುತ್ತರ ಕಳಿಸಿದ ವರ ಪೈಕಿ ಮೂವರ ಹೆಸರನ್ನು ಲಾಟರಿ ಮೂಲಕ ಆರಿಸಲಾಗಿದೆ. ವಿಧಾನಪರಿಷತ್‌ನ ಮಾಜಿ ಸಭಾಪತಿ ವೀರಣ್ಣ ಮತ್ತಿಕಟ್ಟಿ ಅವರು ವಿಜಯ ಕರ್ನಾಟಕ ಕಚೇರಿಗೆ ಆಗಮಿಸಿ ಅದೃಷ್ಟಶಾಲಿ ಓದುಗರನ್ನು ಆರಿಸಿದರು.

ಬಹುಮಾನ ವಿಜೇತ ಮೂವರು ಅದೃಷ್ಟಶಾಲಿಗಳು:

ಎಸ್.ಎ.ಕುಲಕರ್ಣಿ, ಧಾರವಾಡ, ಬಸವರಾಜು, ಬೆಂಗಳೂರು ಮತ್ತು ಆರ್.ಎಸ್.ಮಂತೂರ್
(ಇ-ಮೇಲ್ ಮೂಲಕ)

ವಿಜೇತರಿಗೆ 'ವಿಜಯ ಕರ್ನಾಟಕ'ದ ಅಭಿನಂದನೆಗಳು.

ಚುನಾವಣೆ ಮುಗಿದು ರಾಜ್ಯದಲ್ಲಿ ಹೊಸ ಸರಕಾರ ಸ್ಥಾಪನೆಯಾದ ನಂತರ ಈ ಬಹುಮಾನಗಳನ್ನು ವಿತರಿಸಲಾಗುವುದು

4 ಯುವಜನರಿಗೆ ಎಲ್ಲಿದೆ ಸ್ಥಾನ?



ಚುನಾವಣೆಯಲ್ಲಿ ಯುವಕರಿಗೆ ಆದ್ಯತೆ ನೀಡಬೇಕೆಂಬ ಆಗ್ರಹ, ಒತ್ತಡ ಎಲ್ಲ ಪಕ್ಷಗಳಲ್ಲೂ ಕಾಲಾನುಕಾಲಕ್ಕೆ ಕೇಳಿಬರುತ್ತಲೇ ಇದೆ. ಆದರೆ ಇದು ಎಷ್ಟರ ಮಟ್ಟಿಗೆ ಜಾರಿಯಾಗುತ್ತಿದೆ? ಈ ವಿಷಯ ತಿಳಿದುಕೊಳ್ಳಲು ಈ ಕಾರ್ಟೋಗ್ರಾಮ್ ನೋಡಿ. ಕಳೆದ ಚುನಾವಣೆಯಲ್ಲಿ ಕಣಕ್ಕಿಳಿದಿರುವ ಅಭ್ಯರ್ಥಿಗಳ ಸರಾಸರಿ ವಯಸ್ಸನ್ನು ಸೂಚಿಸುವ ಸರಳ ನಕ್ಷೆ ಇದು. ನಲ್ವತ್ತರ ವಯಸ್ಸಿನ ಮೇಲಿನವರೇ ಕಣಕ್ಕಿಳಿದಿರುವುದು ಇದರಿಂದ ತಿಳಿದುಕೊಳ್ಳಬಹುದು. ಬಿಳಿ ಬಣ್ಣದ ವೃತ್ತಗಳನ್ನು ಲೆಕ್ಕ ಹಾಕಿ. ಇವು 40ಕ್ಕಿಂತ ಕಡಿಮೆ ವಯೋಮಾನದ ಅಭ್ಯರ್ಥಿಗಳ ಕ್ಷೇತ್ರ. ಲೆಕ್ಕ ಹಾಕಿದರೆ ನಿಮಗೆ ಸಿಗುವುದು ಬರೇ 10 ಕ್ಷೇತ್ರಗಳು ಮಾತ್ರ. ರಾಜ್ಯದ ಅತ್ಯಂತ ಯುವ ಕ್ಷೇತ್ರಗಳಿವು. ಕಡು ಹಸಿರು ಬಣ್ಣದ ವೃತ್ತಗಳನ್ನು ನೋಡಿ. ಈ ವಿಧಾನಸಭಾ ಕ್ಷೇತ್ರಗಳ ಒಟ್ಟು ಅಭ್ಯರ್ಥಿಗಳ ಸರಾಸರಿ ವಯಸ್ಸು 55. ಅಂದರೆ ರಾಜ್ಯದ ಮೂರು ಕ್ಷೇತ್ರಗಳಲ್ಲಿನ (ರಾಣೆಬೆನ್ನೂರು, ಶ್ರವಣಬೆಳಗೊಳ ಹಾಗೂ ಶ್ರೀನಿವಾಸಪುರ) ಅಭ್ಯರ್ಥಿಗಳ ಸರಾಸರಿ ವಯಸ್ಸು 50 ದಾಟಿದೆ. ಸಾಮಾನ್ಯ ಹಸಿರು ಬಣ್ಣದ ವೃತ್ತಗಳು 45ರಿಂದ 55 ವಯಸ್ಸಿನ ಅಭ್ಯರ್ಥಿಗಳು ಕಣಕ್ಕಿಳಿದಿರುವ ಕ್ಷೇತ್ರಗಳನ್ನು ಸೂಚಿಸುತ್ತದೆ. ಈ ಬಾರಿ ಈ ಚಿತ್ರಣ ಬದಲಾಗಬಹುದೇ?

5 ಸೋಲಲೂ ಬಿಗ್‌ಫೈಟ್

ಟಿಕೆಟ್ ಸಿಗಲಿ, ಬಿಡಲಿ ಚುನಾವಣೆಯಲ್ಲಿ ಸ್ಪರ್ಧಿಸಲೇಬೇಕು ಎನ್ನುವವರದ್ದೊಂದು ವರ್ಗವೇ ಇದೆ. ಚುನಾವಣೆಯಲ್ಲಿ ಸ್ಪರ್ಧೆ ಹೆಚ್ಚಿದಷ್ಟು ಪ್ರಜಾಪ್ರಭುತ್ವ ವಿಜೃಂಭಿಸುತ್ತದೆ. 224 ವಿಧಾನಸಭಾ ಕ್ಷೇತ್ರಗಳಲ್ಲಿ ಕಳೆದ ಸಲ ಸ್ಪರ್ಧಿಸಿದವರ ಸಂಖ್ಯೆ 2242 ಮಂದಿ. ಅಂದರೆ ಸರಾಸರಿ ಲೆಕ್ಕ ಹಾಕುವುದಾದರೆ ಒಂದೊಂದು ಕ್ಷೇತ್ರದಲ್ಲಿ 10 ಮಂದಿ ಅಭ್ಯರ್ಥಿಗಳಿದ್ದರು.
ಈ ಕುರಿತು ಸಮಗ್ರವಾಗಿ ಗ್ರಹಿಸಲೆಂದೇ ಈ ನಕ್ಷೆ ರೂಪಿಸಲಾಗಿದೆ. ಕಡು ನೀಲಿ ಬಣ್ಣದ ವೃತ್ತ 20ಕ್ಕಿಂತ ಹೆಚ್ಚಿನ ಅಭ್ಯರ್ಥಿಗಳು ಕಣಕ್ಕಿಳಿದಿರುವ ಸಂಕೇತ. ಒಟ್ಟು ಮೂರು ಕ್ಷೇತ್ರಗಳು ಈ ವ್ಯಾಪ್ತಿಗೆ ಬರುತ್ತವೆ. ನೀಲಿ ಬಣ್ಣದ ವೃತ್ತಗಳು 10ರಿಂದ 20 ಅಭ್ಯರ್ಥಿಗಳನ್ನು ಸೂಚಿಸುತ್ತವೆ. ಹಾಗೆಯೇ ತಿಳಿಬಣ್ಣದ ವೃತ್ತಗಳು 5ರಿಂದ 10 ಅಭ್ಯರ್ಥಿಗಳು ಕಣಕ್ಕಿಳಿದಿರುವ ಕ್ಷೇತ್ರಗಳಾಗಿವೆ. ಬಿಳಿ ಬಣ್ಣದ ವೃತ್ತಗಳು 5ಕ್ಕಿಂತ ಕಡಿಮೆ ಅಭ್ಯರ್ಥಿಗಳು ಕಣಕ್ಕಿಳಿದಿರುವ ಕ್ಷೇತ್ರಗಳು. ಅಂಥವು ಬರೇ ನಾಲ್ಕು ಕ್ಷೇತ್ರಗಳು. ಕಳೆದ 2–3 ದಶಕಗಳ ಹಿಂದೆ ರಾಜ್ಯದಲ್ಲಿ ಅವಿರೋಧ ಆಯ್ಕೆ ಮಾಡುವ ಸತ್ಸಂಪ್ರದಾಯ ಇತ್ತು. ಆದರೆ ಈ 'ಕಾಂಪಿಟೀಷನ್ ಯುಗ'ದಲ್ಲಿ ಅದು ಮಾಯವಾಗಿದೆ.



6 ವೋಟ್ ಮಾಡೋಕೆ ಹಿಂಜರಿಕೆ ಏಕೆ?

ಯಾವ ಕ್ಷೇತ್ರದಲ್ಲಿ ಎಷ್ಟು ಪ್ರಮಾಣದಲ್ಲಿ ಮತದಾನ ನಡೆಯುತ್ತದೆ ಎನ್ನುವುದರ ಮೇಲೆ ಅಲ್ಲಿ ಯಾರು ಗೆಲ್ಲುತ್ತಾರೆ ಎನ್ನುವ ವಿಶ್ಲೇಷಣೆ ನಡೆಯುವುದು ಸಾಮಾನ್ಯ. ಕಳೆದ ಚುನಾವಣೆಯಲ್ಲಿ ಎಲ್ಲಿ ಎಷ್ಟರ ಮಟ್ಟಿಗೆ ಮತದಾನವಾಗಿದೆ ಎನ್ನುವ ಚಿತ್ರವನ್ನು ಇದು ಕಟ್ಟಿಕೊಡುತ್ತದೆ. ಬೆಂಗಳೂರು ನಗರದ ಎಲ್ಲ ಕ್ಷೇತ್ರಗಳಲ್ಲಿ (ಬಣ್ಣವಿಲ್ಲದ ವೃತ್ತಗಳು) ಶೇ 60ಕ್ಕಿಂತ ಕಡಿಮೆ ಮತದಾನ ನಡೆದಿವೆ. ಹಾಗೆಯೇ ಹೈ-ಕ ಜಿಲ್ಲೆಗಳಲ್ಲಿ ಕಡಿಮೆ ಮತದಾನ ದಾಖಲಾಗಿವೆ. ನೀಲಿ ವೃತ್ತ ಗಮನಿಸಿ. ಮಧ್ಯ ಕರ್ನಾಟಕ ಭಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮತದಾನ ನಡೆದಿರುವುದನ್ನು ಇದು ಸೂಚಿಸುತ್ತದೆ.



7 ಸ್ಪರ್ಧಿಗಳು ಹೆಚ್ಚಿದರೆ ಮಾರ್ಜಿನ್ ಹೆಚ್ಚು

ಎರಡು ವಿಭಿನ್ನ ಹಾಗೂ ವೈರುಧ್ಯ ಅಂಶಗಳ ತುಲನೆ ಮಾಡುವ ವಿಶಿಷ್ಟ ಬಗೆಯ ಗ್ರಾಫ್ ಸ್ಕಾಟರ್‌ಪ್ಲಾಟ್ ಇದು. ಇದರ ಮೂಲಕ ಶೇಕಡವಾರು ಮತದಾನ ಮತ್ತು ಗೆಲುವಿನ ಅಂತರದ ಹೋಲಿಕೆ ಮಾಡಲಾಗುತ್ತಿದೆ. ಒಂದು ಕ್ಷೇತ್ರದಲ್ಲಿ ಅಭ್ಯರ್ಥಿಗಳ ಸಂಖ್ಯೆ ಹೆಚ್ಚಾದ ಹಾಗೆ ಗೆಲುವಿನ ಅಂತರ (ಮಾರ್ಜಿನ್) ಹೆಚ್ಚಾಗುತ್ತಿದೆ ಎನ್ನುವುದನ್ನು ಈ ಗ್ರಾಫ್ ಸೂಚಿಸುತ್ತದೆ. ಇಲ್ಲಿ ಗೆಲುವಿನ ಅಂತರವನ್ನು ವೈ ಅಕ್ಷದಲ್ಲಿ ಹಾಗೂ ಸ್ಪರ್ಧಿಗಳ ಸಂಖ್ಯೆಯನ್ನು ಎಕ್ಸ್ ಅಕ್ಷದ ಮೂಲಕ ಉಲ್ಲೇಖಿಸಲಾಗಿದೆ.



ಈ ವಾರದ ಆಟ

2008ರಲ್ಲಿ ಚುನಾವಣೆ ನಡೆದಾಗ 13ನೇ ವಿಧಾನಸಭೆಗೆ ಪ್ರವೇಶಿಸಿದ ಅತ್ಯಂತ ಕಿರಿಯ ಶಾಸಕರ ವಯಸ್ಸಿಗಿಂತ ಮೂರು ಪಟ್ಟು ಮತ್ತು ಮೂರು ವರ್ಷ ದೊಡ್ಡವರು ಹಿರಿಯ ಶಾಸಕರು. ಈಗ 5 ವರ್ಷ ಪೂರ್ಣಗೊಂಡಿದೆ. ಈಗ ಹಿರಿ ಶಾಸಕರ ವಯಸ್ಸು ಕಿರಿಯ ಶಾಸಕರ ವಯಸ್ಸಿನ ಮೂರು ಪಟ್ಟಿಗಿಂತ 7 ವರ್ಷ ಕಡಿಮೆ. ಕಿರಿಯ ಶಾಸಕನ ವಯಸ್ಸು 25. ಆದರೆ ಹಿರಿಯರ ಈಗಿನ ವಯಸ್ಸು ಎಷ್ಟು?

VK ಎಂದು ಬರೆದು ಸ್ಪೇಸ್ ಬಿಟ್ಟು election ಎಂದು ಬರೆದು ಮತ್ತೆ ಸ್ಪೇಸ್ ಬಿಟ್ಟು ನಿಮ್ಮ ಉತ್ತರ ಟೈಪ್ ಮಾಡಿ ಬಳಿಕ ಹೆಸರು, ವಯಸ್ಸು, ಊರಿನ ಹೆಸರು ಬರೆದು 58888ಗೆ ಎಸ್‌ಎಂಎಸ್ ಮಾಡಿ.

© Vijay Karnataka ಇಲ್ಲಿ ಪ್ರಕಟವಾಗಿರುವ ಚಿತ್ರಣದ ಯಾವುದೇ ಭಾಗವನ್ನು ಪೂರ್ತಿಯಾಗಲೀ ಅಥವಾ ಭಾಗಶಃವಾಗಲಿ, ಮರುಮುದ್ರಣ ಅಥವಾ ಪ್ರಸರಣ ಮಾಡುವಂತಿಲ್ಲ

■ ಪುಟ ನಿರ್ವಹಣೆ: ಬಿ ಕೆ ಗಣೇಶ್ ■ ಪುಟ ವಿನ್ಯಾಸ ಮತ್ತು ಗ್ರಾಫಿಕ್ಸ್: ಬಿ ಜಿ ಜನಾರ್ದನ್